# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 12(15)
2. ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭಾ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 27.01.2026
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಚಿಕ್ಕಮಗಳೂರಿನಲ್ಲಿ ಕಿರುವಿಮಾನ ನಿಲ್ದಾಣ ಸ್ಥಾಪಿಸಲು ಅಗತ್ಯವಿರುವಷ್ಟು ಜಾಗವನ್ನು ಕಾಯ್ದಿರಿಸಲಾಗಿದೆಯೇ; ಯಾವ ಯಾವ ಸರ್ವೇ ನಂಬರ್ ಗಳಲ್ಲಿ ಎಷ್ಟು ಜಾಗವನ್ನು ಕಾಯ್ದಿರಿಸಲಾಗಿದೆ: (ವಿವರ ನೀಡುವುದು):</td><td>ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್ ಅಭಿವೃದ್ಧಿಪಡಿಸಲು 137-14 ಎಕರೆ ಜಮೀನುಗಳನ್ನು ಗುರುತಿಸಿದ್ದು ಸದರಿ ಜಮೀನಿನಲ್ಲಿ 120-13 ಎಕರೆ ಸರ್ಕಾರಿ ಜಮೀನುಗಳನ್ನು ಕಾಯ್ದಿರಿಸಲಾಗಿದ್ದು, ಅದರ ವಿವರಗಳು ಈ ಕೆಳಗಿನಂತಿವೆ.
<table>
<tr><th>ಕ್ರ. ಸಂ</th><th>ಗ್ರಾಮ</th><th>ಸ. ನಂ</th><th>ವಿಸ್ತೀರ್ಣ, ಎಕರೆ</th></tr>
<tr><td rowspan="8">1</td><td rowspan="8">ಚಿಕ್ಕಮಗಳೂರು</td><td>279</td><td>26-34</td></tr>
<tr><td>280</td><td>19-37</td></tr>
<tr><td>281</td><td>20-24</td></tr>
<tr><td>282</td><td>6-27</td></tr>
<tr><td>283</td><td>10-15</td></tr>
<tr><td>284</td><td>5-32</td></tr>
<tr><td>285</td><td>10-34</td></tr>
<tr><td>290</td><td>19-20</td></tr>
<tr><td colspan="3">ಒಟ್ಟು</td><td>120-13</td></tr>
</table>
ಮುಂದುವರೆದು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಹಾಗೂ ಹಿರೇಮಗಳೂರು ಗ್ರಾಮದಲ್ಲಿ 17-01 ಎಕರೆ ಖಾಸಗಿ ಜಮೀನುಗಳನ್ನು ಏರ್‌ಸ್ಟ್ರಿಪ್ ಅಭಿವೃದ್ಧಿಗಾಗಿ ಜಿಲ್ಲಾಧಿಕಾರಿಗಳ ಮೂಲಕ ಭೂ-ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ:28.07.2025ರಂದು ನೀಡಿದೆ.<br><br>ಅದರಂತೆ, ಚಿಕ್ಕಮಗಳೂರು ಜಿಲ್ಲಾಡಳಿತವು ಏರ್‌ಸ್ಟ್ರಿಪ್ ಅಭಿವೃದ್ಧಿಗೆ ಅವಶ್ಯಕವಿರುವ 17-01 ಎಕರೆ ಜಮೀನಿನ ಪೈಕಿ 16-31 ಎಕರೆ ಜಮೀನುಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ: 05.12.2025ರಂದು ಹೊರಡಿಸಿದೆ.</td></tr>
<tr><td>(ಆ)</td><td>ಚಿಕ್ಕಮಗಳೂರಿನಲ್ಲಿ ಕಿರುವಿಮಾನ ನಿಲ್ದಾಣ ಸ್ಥಾಪಿಸಲು ಡಿ.ಪಿ.ಆರ್ ತಯಾರಿಸಲಾಗಿದೆಯೆ: ಎಷ್ಟು ಆಸನಗಳ ಸಾಮರ್ಥ್ಯದ ವಿಮಾನಗಳನ್ನು ನಿಲುಗಡೆ ಮಾಡಲು ಉದ್ದೇಶಿಸಲಾಗಿದೆ;</td><td>ಚಿಕ್ಕಮಗಳೂರು ಏರ್‌ಸ್ಟ್ರಿಪ್ ಅಭಿವೃದ್ಧಿಗೆ ಡಿ.ಪಿ.ಆರ್ ತಯಾರಿಸುವ ಸಮಾಲೋಚಕರನ್ನು ನೇಮಿಸುವ ಟೆಂಡರ್ ಕರೆಯುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.</td></tr>
</table>

| | | |
|---|---|---|
| (ಇ) | ವಿಮಾನ ನಿಲ್ದಾಣ ಸ್ಥಾಪನೆ ವಿಚಾರದಲ್ಲಿ ಆಗಿರುವ ಪ್ರಗತಿ ಏನು; ಯಾವ ಕಾಲಮಿತಿಯಲ್ಲಿ ಕಿರುವಿಮಾನ ಇಳಿದಾಣ ಸ್ಥಾಪಿಸಲಾಗುವುದು?(ವಿವರ ಒದಗಿಸುವುದು); | ಚಿಕ್ಕಮಗಳೂರಿನಲ್ಲಿ ಏರ್‌ಸ್ಟ್ರಿಪ್ ಅಭಿವೃದ್ಧಿಪಡಿಸಲು 137-14 ಎಕರೆ ಜಮೀನುಗಳನ್ನು ಗುರುತಿಸಿದ್ದು ಸದರಿ ಜಮೀನಿನಲ್ಲಿ 120-13 ಎಕರೆ ಸರ್ಕಾರಿ ಜಮೀನು ಹಾಗೂ 17-01 ಎಕರೆ ಖಾಸಗಿ ಜಮೀನುಗಳಾಗಿರುತ್ತದೆ. ಸದರಿ ಖಾಸಗಿ ಜಮೀನುಗಳನ್ನು ಜಿಲ್ಲಾಧಿಕಾರಿಗಳ ಮೂಲಕ ಭೂ-ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ದಿನಾಂಕ: 28.07.2025ರಂದು ನೀಡಿದೆ.<br><br>ಅದರಂತೆ, ಚಿಕ್ಕಮಗಳೂರು ಜಿಲ್ಲಾಡಳಿತವು ಏರ್‌ಸ್ಟ್ರಿಪ್ ಅಭಿವೃದ್ಧಿಗೆ ಅವಶ್ಯಕವಿರುವ 17-01 ಎಕರೆ ಜಮೀನಿನ ಪೈಕಿ 16-31 ಎಕರೆ ಜಮೀನುಗಳಿಗೆ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ: 05.12.2025 ರಂದು ಹೊರಡಿಸಿದೆ.<br><br>ಖಾಸಗಿ ಜಮೀನುಗಳ ಭೂ-ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ ಏರ್‌ಸ್ಟ್ರಿಪ್ ನ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

**ಸಂಖ್ಯೆ: ಮೂಅಇ15 ರಾಅವಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು